ನೀನು ನೋಡಿದ ಆ ವ್ಯಕ್ತಿಯ ದೇಹ ಈ ಜಾಗದಲ್ಲಿಲ್ಲ ಅಂದ್ರೆ, ಆ ದೇಹವನ್ನು ಯಾರೋ ಸಾಗಿಸಿದ್ದಾರೆ! ಆ ವ್ಯಕ್ತಿಗಳೇ ರಾಮಸ್ವಾಮಿಗೆ ಈ ದುರ್ಗತಿಯನ್ನು ತಂದೊಡ್ಡಿದ್ದಾರೆ'

ರಾಮಸ್ವಾಮಿಯ ಮುಖಕ್ಕೆ ಮೊಬೈಲಿನ ದೀಪ ಹಾಕಲು ಹೇಳಿದ ಕಿರಣ.

'ಅವನ ಜೀವಕ್ಕೆ ಅಪಾಯ ಇಲ್ಲ ತಾನೆ?' ಮೇನಕಾಳ ಆತಂಕದ ಪ್ರಶ್ನೆಗೆ ಕಿರಣನಿಗೆ ಅನುಮಾನ ಕಂಡಿತು. ಸಹಾಯಕ್ಕೆ ಯಾರಾದರೂ ಇರುವರೇನೋ ಎಂದು ಸುತ್ತಲೂ ಕಣ್ಣಾಡಿಸಿದ. ರಾಮಸ್ವಾಮಿಯ ಜೊತೆಗೆ ಅವರಿಬ್ಬರನ್ನು ಬಿಟ್ಟರೆ ಯಾವ ನರಪಿಳ್ಳೆಯೂ ಅಲ್ಲಿರುವುದು ಗೋಚರಿಸಲಿಲ್ಲ.

ಕಿರಣ ಮೇನಕಾಳನ್ನು ಅಲ್ಲಿಯೇ ಬಿಟ್ಟು ಟಾರ್ಚನ್ನು ತೆಗೆಯಲು ಮುಂದೆ ಹೋದ. ಅದನ್ನು ತೆಗೆದು ರಾಮಸ್ವಾಮಿಯ ದೇಹದ ಮೇಲೆ ಬೆಳಕನ್ನು ಹರಿಯ ಬಿಟ್ಟ. ಯಾವುದೇ ಗಾಯದ ಕುರುಹುಗಳು ಕಾಣಿಸಲಿಲ್ಲ. ಮೆತ್ತಗೆ ಅವನ ದೇಹವನ್ನು ಹಿಡಿದು ಅಲುಗಿಸಿದ. ಇನ್ನೂ ಉಸಿರಾಡುವುದು ಕಂಡಿತು. ಆಲೆಮನೆಯ ಪಕ್ಕದಲ್ಲಿ ನೀರು ಹರಿಯುವುದನ್ನು ಕಂಡಿದ್ದ ಕಿರಣ ತಕ್ಷಣವೇ ಅವನು ಮೇನಕಾಳಿಗೆ ಹೇಳಿ ನಾಲೆಯತ್ತ ನಡೆದ. ಅವಳು ಅವನನ್ನು ಹಿಂಬಾಲಿಸಿದಳು. ಅವನು ಅಲ್ಲಿಯೇ ಇದ್ದ ಹಳೆಯ ಪ್ಲಾಸ್ಟಿಕ್ ಮಗ್‌ನಿಂದ ನೀರು ತುಂಬಿಸಿ ಹಿಂದಕ್ಕೆ ಬಂದ. ರಾಮಸ್ವಾಮಿಯ ಮುಖಕ್ಕೆ ನೀರು ಹನಿಸಿದ. ರಾಮಸ್ವಾಮಿ ನಿದ್ದೆಯಿಂದ ಎದ್ದಂತೆ ಕಣ್ಣು ತೆರೆದು ಮೆಲ್ಲಗೆ ನರಳಿದ. ಕಿರಣ ಅವನ ಭುಜವನ್ನು ಹಿಡಿದು ಕೇಳಿದ.

'ರಾಮಸ್ವಾಮಿ, ಏನಾಯ್ತು? ಯಾಕೆ ಹೀಗೆ ಬಿದ್ದಿದ್ದೀಯಾ?'

ರಾಮಸ್ವಾಮಿ ತಕ್ಷಣವೇ ಎದ್ದು ಕುಳಿತ ಕಣ್ಣುಗಳನ್ನು ಹೊಸಕಿಕೊಂಡ.

'ಯಾರು, ಯಾರು... ನೀವು?' ಗಟ್ಟಿ ದನಿಯಲ್ಲಿ ಕಿರುಚಿದ.

ಕಿರಣ ಅವನ ಮೈಮೇಲೆ ಸಾಂತ್ವನದ ಕೈಗಳನ್ನು ಹಚ್ಚಿದ. ರಾಮಸ್ವಾಮಿಯ ಕಣ್ಣುಗಳು ಬೆದರಿಕೆಯಿಂದ ತೆರೆದುಕೊಂಡಿದ್ದವು. ಹಣೆಯ ಭಾಗದಲ್ಲಿ ಉಬ್ಬಿದ ಹಸಿ ಗಾಯವಿತ್ತು. ಅಂದರೆ ರಾಮಸ್ವಾಮಿಯನ್ನು ಯಾರೋ ಹೊಡೆದು ಉರುಳಿಸಿದ್ದಾರೆನ್ನುವುದು ಖಚಿತ! ಯಾವ ಕಾರಣಕ್ಕೆ? ಪ್ರಶ್ನೆ ಹಾಗೆಯೇ ಉಳಿಯಿತು. ಅದನ್ನು ಪರಾಮರ್ಶಿಸುವ ಸಮಯವೂ ಇದಲ್ಲವೆನಿಸಿತು.

ರಾಮಸ್ವಾಮಿ ಇಬ್ಬರತ್ತಲೂ ಮುಖ ತಿರುಗಿಸಿ ನೋಡಿದ. ತಕ್ಷಣವೇ ಅವನ ಕಣ್ಣುಗಳಲ್ಲಿ ನೀರು ಇಳಿಯಿತು.

'ರಾಮಸ್ವಾಮಿ, ನಿನ್ನನ್ನು ಈ ಸ್ಥಿತಿಗೆ ತಂದೋರು ಯಾರು?' ಮೇನಕಾ ಆತಂಕ ಮರೆತು ಶಾಂತವಾದ ದನಿಯಲ್ಲಿ ಪ್ರಶ್ನಿಸಿದಳು. ಅವನು ಏನೂ ತಿಳಿಯದವರಂತೆ ತಲೆಯನ್ನು ಅಡ್ಡಡ್ಡಲಾಗಿ ಆಡಿಸಿದ.

'ಮತ್ತೆ, ನಿನ್ನ ಈ ಸ್ಥಿತಿಗೆ ಕಾರಣವೇನು?' ದೀರ್ಘ ನಿಟ್ಟುಸಿರಿಟ್ಟ ರಾಮಸ್ವಾಮಿ ನೆನಪು ಮಾಡಿಕೊಳ್ಳುವಂತೆ ಕಣ್ಣುಗಳನ್ನು ಮುಚ್ಚಿದ.

'ಆಲೆಮನೆ ದಾರಿಯಿಂದ ಬರ್ತಾ ಇದ್ದೆ. ನನ್ನ ಹಿಂದೆ ಯಾರೋ ನಡೆದಾಡುವುದು ಕೇಳಿತು. ನಾನಂದುಕೊಂಡದ್ದು ನೀವಿಬ್ರೂ ನನ್ನನ್ನು ಹಿಂಬಾಲಿಸಿಕೊಂಡು ಬರ್ತಿದ್ದೀರೀಂತ... ಅದ್ಕೆ ಸುಮ್ಮನಿದ್ದೆ. ಮತ್ತೆ ಹಿಂತಿರುಗುವಾಗ ಇಬ್ರೂ ಕಾಣಿಸ್ಲಿಲ್ಲ. ಅದ್ಕೆ ಟಾರ್ಚ್ ಬೆಳಗಿಸಿ ಅತ್ತ ನೋಡಿದೆ. ಗಟ್ಟಿ ದೃಢಕಾಯದ ವ್ಯಕ್ತಿಗಳಿಬ್ಬರು ಯಾರನ್ನೋ ಎತ್ತಿಕೊಂಡು ಸಾಗುತ್ತಿರುವುದು ಕಂಡಿತು. ಅವರಲ್ಲೊಬ್ಬ ನನ್ನನ್ನು ಟಾರ್ಚ್ ಬೆಳಗಿಸಿದ್ದಕ್ಕೆ ಬೈದ. ನನಗೆ ಅವರು ಅಪರಿಚಿತರು ಅನಿಸಿತು. ಅದಕ್ಕೆ ಯಾರೂಂತ ಪ್ರಶ್ನಿಸ್ದೆ. ಅವರಿಬ್ಬರು ವ್ಯಕ್ತಿಯ ದೇಹವನ್ನು ಕೆಳಗಿರಿಸಿ ನನ್ನತ್ತ ಧಾವಿಸಿದರು. ನಾನು ಕೈಯಲ್ಲಿದ್ದ ದೊಣ್ಣೆಯನ್ನು ಎತ್ತಿ ಹಿಡಿದು ಸೆಟೆದು ನಿಂತೆ...' ಮಾತು ನಿಲ್ಲಿಸಿದ ರಾಮಸ್ವಾಮಿ ಕುತೂಹಲ ಹೆಚ್ಚಿಸುವಂತೆ.

'ಮತ್ತೇನಾಯ್ತು ರಾಮಸ್ವಾಮಿ?' ಮೇನಕಾಳ ಪ್ರಶ್ನೆಗೆ ರಾಮಸ್ವಾಮಿ ಮುಖ ಕೆಳಗೆ ಹಾಕಿದ. ಆತನ ಮುಖದಲ್ಲಿ ನೋವು, ಆಯಾಸಗಳು ತುಂಬಿದ್ದವು. ಕಿರಣ ಅವನ ಸ್ಥಿತಿಯನ್ನು ಅರಿತುಕೊಂಡವನೇ ಮೇನಕಾಳತ್ತ ನೋಡಿದ.

'ಮೇನಕಾ, ಇವನನ್ನು ಫಾರ್ಮ್ ಹೌಸ್‌ಗೆ ಕರೆದುಕೊಂಡು ಹೋಗೋಣ ನಡಿ'

ಬೈಕನ್ನು ಅಲ್ಲಿಯೇ ಬಿಟ್ಟು ಇಬ್ಬರೂ ರಾಮಸ್ವಾಮಿಯನ್ನು ಹಿಡಿದು, ಎಬ್ಬಿಸಿ ನಿಲ್ಲಿಸಿದರು.

'ನಡೆಯ ಬಲ್ಲೆಯ ರಾಮಸ್ವಾಮಿ?' ಆಪ್ಯಾಯತೆಯಿಂದ ಕೇಳಿದ ಕಿರಣ. ಅವನು ತಲೆಯಲುಗಿಸಿದ.

'ನಡೆಯಬಲ್ಲೆ, ನನ್ನ ಬುಟ್ ಬುಡಿ' ಮೆಲ್ಲಗೆ ಹೆಜ್ಜೆಯಿಟ್ಟು ಸಪೂರ ದಾರಿಯನ್ನು ಹಿಡಿದ. ಕಿರಣ ಆಸರೆಗೆ ನಿಂತಂತೆ ಅವನ ಹಿಂದೆಯೇ ನಡೆದ ಟಾರ್ಚ್ ಬೆಳಗಿಸುತ್ತಾ. ಮೇನಕಾ ಕಿರಣನನ್ನು ಹಿಡಿದುಕೊಂಡಂತೆ ಹೆಜ್ಜೆಯಿಟ್ಟಳು. ಕಡಿದಾದ ದಾರಿಯಲ್ಲಿ ನಡೆಯುವಾಗ ದೀಪಗಳೆಲ್ಲವೂ ಆರಿ ಕತ್ತಲು ತುಂಬಿತ್ತು. ಕಿರಣನನ್ನು ನೋಡುವ ಆತುರದಲ್ಲಿ ಅವಳು ದೀಪವನ್ನೆಲ್ಲಾ ಆರಿಸಿ ಬಾಗಿಲನ್ನು ಮುಚ್ಚದೆ ಬಂದಿದ್ದಳು.

ವರಾಂಡಕ್ಕೆ ಬಂದ ತಕ್ಷಣವೇ ಅವಳು ಬಾಗಿಲು ತೆರೆದು ಒಳಗಿನಿಂದ ದೀಪದ ಗುಂಡಿ ಅದುಮಿದಳು. ದೀಪ ಬೆಳಗಿದಾಗ ಮೂವರೂ ಬೆಳಕಿಗೆ ಕಣ್ಣುಗಳನ್ನು ಹೊಂದಿಸಿಕೊಂಡರು.

ರಾಮಸ್ವಾಮಿಯನ್ನು ಸೋಫಾದ ಮೇಲೆ ಮಲಗಿಸಿದ ಕಿರಣ. ಮೇನಕಾ ನೀರಿನ ಹೂಜಿಯಿಂದ ನೀರನ್ನು ಲೋಟಕ್ಕೆ ಬಗ್ಗಿಸಿ ಅವನ ಮುಂದೆ ಹಿಡಿದಳು. ಅವನು ನೀರನ್ನು ಕಾಣದವರಂತೆ ಗಟಗಟನೆ ಕುಡಿದು ಮುಗಿಸಿದ.

'ಇನ್ನೂ ಬೇಕೇನು?' ಮೇನಕಾಳ ಕೇಳಿಕೆಗೆ ಬೇಡವೆನ್ನುವಂತೆ ತಲೆಯಲುಗಿಸಿದ.

'ರಾಮಸ್ವಾಮಿ, ನೀನು ಆ ಮೂವರನ್ನು ಗುರುತಿಸಬಲ್ಲೆಯ?'

'ಇಲ್ಲ, ಅವರು ಹೊತ್ತೊಯ್ಯುತ್ತಿದ್ದ ವ್ಯಕ್ತಿಯನ್ನು ಮಾತ್ರ ನಾನು ಗುರುತಿಸಿದ್ದೆ. ಉಳಿದವರನ್ನು ನಾನು ಗಮನಿಸಿಲ್ಲ' ಕಿರಣನಂತೆ ಮೇನಕಾ ಕೂಡ ಕುತೂಹಲದಿಂದ ಅವನತ್ತ ಬಾಗಿದಳು.

'ಹೇಳು, ಆ ವ್ಯಕ್ತಿ ನೋಡೋದಿಕ್ಕೆ ಹೇಗಿದ್ದ?'

ರಾಮಸ್ವಾಮಿ ಕೈಯನ್ನು ಉದ್ದಕ್ಕೂ ಚಾಚಿ ತೋರುಬೆರಳನ್ನು ಕಿರಣನತ್ತ ಚಾಚಿದ. ಮೇನಕಾ ಕಿರಣನತ್ತ ಆಶ್ಚರ್ಯದ ನೋಟ ಹರಿಸಿದಳು.

'ನನ್ನ ಮಾತು ಸರಿ ಹಾಗಿದ್ರೆ, ಕಿರಣ. ಅಲ್ಲಿ ಬಿದ್ದಿದ್ದ ವ್ಯಕ್ತಿ ನಿನ್ನ ತರನೇ ಇದ್ದ. ಅದಕ್ಕೆ ನಾನೂ ಗಾಬರಿಯಾಗಿದ್ದೆ'

'ಆ ವ್ಯಕ್ತಿ ಕೂಡ ನನ್ನ ಹಾಗೆ ಇದ್ನ. ಅವನ ಬಗ್ಗೆ ಬೇರೇನಾದರೂ ವಿಶೇಷತೆ ಗಮನಿಸಿದ್ದೀಯಾ?'

ರಾಮಸ್ವಾಮಿ ನೆನಪಿಗೆ ತರಲು ಯತ್ನಿಸಿದ. 'ಆ ವ್ಯಕ್ತಿಯ ಕ್ರಾಪ್ ಹಣೆಯ ಮೇಲೆ ಬಿದ್ದಿತ್ತು. ಮುಖದಲ್ಲಿ ಅಗಾಧ ನೋವಿತ್ತು'

'ಸರಿ, ಆ ವ್ಯಕ್ತಿಗೆ ಬಲವಾದ ಹೊಡೆತ ಬಿದ್ದಿರಬೇಕು. ಅದಕ್ಕೆ ಮುಖ ಕಿವುಚಿದ್ದಾನೆ. ಆ ವ್ಯಕ್ತಿಯ ಕೂದಲೂ ನನ್ನ ಹಾಗೆ ಇತ್ತೇ? ಮೇನಕಾ, ನನ್ನದು ಕ್ರಾಪ್ ಕೂದಲಲ್ಲವೆ?' ಆ ಸಮಯದಲ್ಲಿಯೂ ನಗೆಯ ತುಣುಕು ಹಾರಿಸಿದ ಕಿರಣ.

'ಕಿರಣ, ಇದು ತಮಾಷೆ ಮಾಡೋ ಸಮಯವಲ್ಲ. ಸ್ವಲ್ಪ ಗಂಭೀರವಾಗಿ ಈ ವಿಷ್ಯದ ಬಗ್ಗೆ ಆಲೋಚಿಸು. ಆ ವ್ಯಕ್ತಿ ನಿನ್ನ ಹಾಗೆ ಇರೋದ್ರಿಂದಲೇ ಇಷ್ಟೆಲ್ಲಾ ಸಮಸ್ಯೆಗಳು ಉದ್ಭವಿಸಿರೋದು. ಕಾಕುಟ್ಟ ಅಪಾರ್ಥ ಮಾಡಿಕೊಂಡು ಆ ಬಡಪಾಯಿಗೆ ಹೊಡೆದಿದ್ದಾನೆ' ಸಂದೇಹ ಹೊರಗೆಡವಿದಳು ಮೇನಕಾ.

'ಮೇನಕಾ, ಅದೇ ಈಗ ತೊಡಕಾಗಿರೋದು. ಒಬ್ಬರ ಹಾಗೆಯೇ ಜಗತ್ತಿನಲ್ಲಿ ಏಳು ಮಂದಿ ಇರ್ತಾರಂತಲ್ಲ? ಅದರಲ್ಲಿ ಇಬ್ಬರು ಈ ಫಾರ್ಮ್ ಹೌಸ್‌ನಲ್ಲಿಯೇ ಓಡಾಡ್ತಿದ್ದಾರೆನ್ನೋದು ಗೊತ್ತಾಯ್ತು' ಅವನ ತಮಾಷೆಯ ಮಾತಿಗೆ ನಗು ಬಂದರೂ ಅವನು ವಿಷಯವನ್ನು ಬದಲಾಯಿಸುತ್ತಿದ್ದಾನೆ ಅನಿಸದಿರಲಿಲ್ಲ.

'ಕಿರಣ, ಈ ಸಮಸ್ಯೆ ಇತ್ಯರ್ಥವಾಗದೆ ನೀನು ಅನಗತ್ಯ ಏನೇನೋ ತಿಳ್ಕೊಳ್ಬೇಡ'

'ರಾಮಸ್ವಾಮಿಯಂತಹ ಸಾಧು ಮನುಷ್ಯನಿಗೆ ಅಪಾಯ ತಂದೊಡ್ಡಿದ ವ್ಯಕ್ತಿ ಯಾರು? ನನ್ನ ಹಾಗೆಯೇ ಇರುವ ಇನ್ನೊಬ್ಬ ವ್ಯಕ್ತಿ ಯಾರು? ಮೊದಲಿಗೆ ಇದನ್ನು ಪತ್ತೆ ಮಾಡ್ಬೇಕು. ಅದಕ್ಕೆ ನನ್ನ ಹಿತೈಷಿ ಅಂದ್ರೆ ನಿನ್ನ ಚಿಕ್ಕಮ್ಮ ಕಾಶಮ್ಮನನ್ನು ವಿಚಾರಿಸಿದರೆ ಇದಕ್ಕೊಂದು ಎಳೆ ಕಾಣಬಹುದು. ಇದು ನಿನ್ನಿಂದ ಸಾಧ್ಯಾನಾ?'

ಮೇನಕಾ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಿರುವುದು ಕಿರಣನ ಗಮನಕ್ಕೆ ಬಂತು.

'ಸರಿ, ಅದನ್ನು ಪತ್ತೆ ಮಾಡೋಣ. ಅದಕ್ಕೂ ಮೊದಲು ನಿನಗೆ ಕಾಶಮ್ಮನ ಮೇಲಿರೋ ನಿರ್ಲಕ್ಷ್ಯತನಕ್ಕೆ ಕಾರಣವೇನು ಅನ್ನೋದು ತಿಳಿಬೇಕು' ಕಿರಣನ ಪ್ರಶ್ನೆಗೆ ಮೇನಕಾಳ ಮುಖದ ಬಣ್ಣ ಬದಲಾಯಿತು.

**(ಸಶೇಷ)**

